# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

**ಸತ್ರ ಪ್ರಕರಣ ಸಂಖ್ಯೆ.79/2025**

ಪಿರ್ಯಾದುದಾರರು : ಮದ್ದೂರು ಪೊಲೀಸ್ ಠಾಣೆ.

- ವಿರುದ್ಧ -

ಆರೋಪಿಗಳು : ಶರತ್ ಜಿ.ಆರ್. ಮತ್ತು ಇತರರು.

**: ದೋಷಾರೋಪಣೆ :**

ನಾನು ಶ್ರೀಮತಿ ಸಯೀದುನ್ನೀಸ, ಎಂ.ಎ., ಎಲ್‌ಎಲ್.ಬಿ., 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ :

ನೀವು ಆರೋಪಿಗಳು :

1. ಶ್ರೀ ಶರತ್ ಜಿ.ಆರ್., 26 ವರ್ಷ,
   ಬಿನ್ ರಾಜು.

2. ಶ್ರೀ ಭರತ್ ಜಿ.ಆರ್., 23 ವರ್ಷ,
   ಬಿನ್ ರಾಜು.

3. ಶ್ರೀ ಮುರುಗನ್, 39 ವರ್ಷ,
   ಬಿನ್ ಸುಂದರ.

4. ಶ್ರೀ ಸೂರ್ಯ ಎಂ.ಬಿ., 34 ವರ್ಷ,
   ಬಿನ್ ಭಾಸ್ಕರ.

5. ಶ್ರೀ ಪ್ರಭು ಎಂ.ಬಿ., 31 ವರ್ಷ,
   ಬಿನ್ ಭಾಸ್ಕರ.

6. ಶ್ರೀ ಅಜಯ್ ಜಿ.ಎಸ್., 28 ವರ್ಷ,
   ಬಿನ್ ಲೇಟ್ ಶೇಖರ್.

7. ಶ್ರೀ ವಿಜಯ್ ಜಿ.ಎಸ್., 30 ವರ್ಷ,
   ಬಿನ್ ಲೇಟ್ ಶೇಖರ್.

8. ಶ್ರೀ ನಂದೀಶ ವಿ., 24 ವರ್ಷ,
   ಬಿನ್ ವೆಂಕಟೇಶ.

9. ಶ್ರೀ ರಾಮು, 42 ವರ್ಷ,
ಬಿನ್ ಪೋತ.

10. ಶ್ರೀಮತಿ ತಮಿಳರಸಿ, 45 ವರ್ಷ,
ಕೋಂ. ರಾಜ.

ಆ 1 ರಿಂದ 10 ವಾಸಃ ಗೆಜ್ಜಲಗೆರೆ ಕಾಲೋನಿ,
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ.

ಮೊದಲನೆಯದಾಗಿ, ದಿನಾಂಕಃ14.01.2025 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಚಾಸಾ-1 ಸತ್ಯರಾಜು ಮತ್ತು ಚಾಸಾ-2 ಅರುಣ್ ಕುಮಾರ್ ರವರು ಮದ್ದೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಗೆಜ್ಜಲಗೆರೆ ಕಾಲೋನಿ ಗ್ರಾಮದ ವಿ.ಸಿ. ಕಾಲುವೆ ಕಡೆ ಹೋಗಿದ್ದಾಗ 1 ರಿಂದ 8ನೇ ಆರೋಪಿತರಾದ ನೀವು ಸೇತುವೆ ಮೇಲೆ ಕುಳಿತುಕೊಂಡು ಮದ್ಯ ಸೇವನೆ ಮಾಡುತ್ತಿದ್ದು, ಚಾಸಾ-1 ಮತ್ತು 2 ರವರನ್ನು ನೋಡಿ ಏಕೋದ್ದೇಶ ಹೊಂದಿ ಶಾಂತಿ ಭಂಗ ಉಂಟು ಮಾಡುವಂತೆ ಸಾರ್ವಜನಿಕವಾಗಿ ಅವರನ್ನು ಉದ್ದೇಶಿಸಿ 'ಸೂಳೆಮಕ್ಕಳಾ ನಿಂತುಕೊಳ್ಳಲಾ, ಹೆದರಿಕೊಂಡು ಓಡುತ್ತಿದ್ದೀರಾ' ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ಅವರು ಏಕೆ ನಮಗೆ ಬೈಯುತ್ತೀರಿ ಎಂದು ಕೇಳಿದಾಗ ಆರೋಪಿತರಾದ ನೀವು ಕುಡಿಯುತ್ತಿದ್ದ ಬಾಟಲುಗಳನ್ನು ಅವರ ಮೇಲೆ ಎಸೆದು ಅವರಿಗೆ ಅವಮಾನ ಮಾಡಿರುತ್ತೀರಿ ಹಾಗೂ ಚಾಸಾ-1 ರವರನ್ನು ಉದ್ದೇಶಿಸಿ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ-1 ರವರು ಗೆಜ್ಜಲಗೆರೆ ಕಾಲೋನಿ ಗ್ರಾಮದ ತಮ್ಮ ಮನೆಯ ಬಳಿ ನಿಂತುಕೊಂಡು ಮೆಂಬರ್ ರವಿರವರಿಗೆ ಫೋನ್ ಮಾಡಿ ವಿಚಾರ ಹೇಳುತ್ತಿದ್ದಾಗ 1, 4 ಮತ್ತು 8ನೇ ಆರೋಪಿತರಾದ ನೀವು ಚಾಸಾ-1 ರವರೊಂದಿಗೆ ಜಗಳ ಮಾಡಲು ಏಕೋದ್ದೇಶ ಹೊಂದಿ

ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ-1 ರವರ ಮನೆಯ ಬಳಿ ಹೋಗಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.189(2) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಮೂರನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ರಿಂದ 3 ಮತ್ತು 5 ರಿಂದ 7, 9 ಮತ್ತು 10 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಕೈಗಳಲ್ಲಿ ಮಾರಕಾಸ್ತ್ರಗಳಾದ ಕಬ್ಬಿಣದ ರಾಡು, ದೊಣ್ಣೆ ಮತ್ತು ಇಟ್ಟಿಗೆಗಳನ್ನು ಹಿಡಿದುಕೊಂಡು ಬಂದು ಚಾಸಾ-1 ರವರೊಂದಿಗೆ ಗಲಾಟೆ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.189(4) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1, 4 ಮತ್ತು 8 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಚಾಸಾ-1 ರವರ ಮನೆಯ ಬಳಿ ಹೋಗಿ ಅವರ ಕತ್ತಿನಪಟ್ಟಿ ಹಿಡಿದು ಎಳೆದಾಡಿ ಅವರಿಗೆ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಐದನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 3 ನೇ ಆರೋಪಿಯಾದ ನೀವು ಚಾಸಾ-2 ರವರನ್ನು ಕೊಲೆ ಮಾಡುವ ಏಕೋದ್ದೇಶ ಹೊಂದಿ ಕಬ್ಬಿಣದ ರಾಡಿನಿಂದ ಹೊಡೆದರೆ ಸಾಯುತ್ತಾರೆ ಎಂದು ತಿಳಿದಿದ್ದರೂ ಸಹ ಅವರ ತಲೆಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.109(1) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಆರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1, 2 ಮತ್ತು 5ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ದೊಣ್ಣೆಯಿಂದ ಚಾಸಾ-1 ರಿಂದ 4 ರವರ ಮೇಲೆ ಹಲ್ಲೆ ಮಾಡಿ ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.118(1) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಏಳನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 4ನೇ ಆರೋಪಿಯಾದ ನೀವು ಏಕೋದ್ದೇಶ ಹೊಂದಿ ಇಟ್ಟಿಗೆಯಿಂದ ಚಾಸಾ-2 ರವರ ಮೇಲೆ ಹಲ್ಲೆ ಮಾಡಿ ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ನ್ಯಾಯ ಸಂಹಿತೆ ಕಲಂ.118(2) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1 ರಿಂದ 4 ರವರಿಗೆ ಭಯ ಬರುವ ರೀತಿಯಲ್ಲಿ ಅವರನ್ನು ಉದ್ದೇಶಿಸಿ **'ಈ ದಿವಸ ಇವರನ್ನು ಬಿಡಬಾರದು, ಮುಗಿಸಿಬಿಡೋಣ, ಹೋದಸಲವೇ ಇವರನ್ನು ಮುಗಿಸಬೇಕಿತ್ತು ಎಂದು ಹಾಗೂ ನಿಮಗೆ ಒಂದು ಗತಿ ಕಾಣಿಸುತ್ತೇವೆ'** ಎಂದು ಜೀವ ಬೆದರಿಕೆಯನ್ನು ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತೀಯ ದಂಡ ಸಂಹಿತೆ ಕಲಂ.351(3) ಸಹವಾಚಕ ಕಲಂ.190 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಈ ಮೇಲೆ ಹೇಳಿರುವ ದೋಷಾರೋಪಣೆ ಬಗ್ಗೆ ನಿಮ್ಮ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯತಕ್ಕದ್ದು ಎಂದು ಆದೇಶಿಸಲಾಗಿದೆ.

ದಿನಾಂಕಃ **09.12.2025.**

(ಸಯೀದುನ್ನೀಸ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.